# BRUHAT BANGALORE MAHANAGARA PALIKE

No: DCF/PR:- 1649/2020-21

Office of the
Deputy Conservator of Forests
Bruhat Bangalore Mahanagara Palike
N.R. Square Annex Biliding-3
Bengaluru, dated: 04.02.2021

To
The I.T Adviser
BBMP
Bengaluru.

Sir,

Sub: Uploading the documents of Official Memorandum issued with regarding removal of tree in connection with Construction of subway road from NES Circle to Yelahanka Railway Station for Railway crossing BBMP-reg

Ref: As per the orders of Hon'ble High Court of Karnataka in WP:17841/2018

******

Documents pertaining to the Official Memorandum issued with regarding of removal of trees in connection with Construction of subway road from NES Circle to Yelahanka Railway Station for Railway crossing are enclosed here with a request to upload to the same in the website of BBMP.

Yours faithfully
4/2/21.
Tree Officer and
Deputy Conservator of Forests,
Bruhat Bangalore Mahangara Palike.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಉಅಸಂ/ಪಿಆರ್/1316 /2020-21

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಎನ್.ಆರ್.ಸ್ಕ್ವೇರ್, ಅನೆಕ್ಸ್ ಬಿಲ್ಡಿಂಗ್-3
ಬೆಂಗಳೂರು, ದಿನಾಂಕ: 03 .02.2021.

## ಕಛೇರಿ ಅಧಿಕೃತ ಜ್ಞಾಪನಾ ಪತ್ರ

ವಿಷಯ: ಬಿಬಿಎಂಪಿ ಯಲಹಂಕ ವಲಯದ ವ್ಯಾಪ್ತಿಯ ಎನ್. ಇ.ಎಸ್ ಸರ್ಕಲ್ ಇಂದ ಯಲಹಂಕ ರೈಲ್ವೆ ಸ್ಟೇಷನ್ ವೃತ್ತಕ್ಕೆ ಹೋಗುವ ಮಾರ್ಗದಲ್ಲಿ ಅನುಷ್ಠಾನಗೊಳಿಸುತ್ತಿರುವ ಸಬ್ ವೇ ರೋಡ್ ನಿರ್ಮಾಣ ಕಾಮಗಾರಿಗೆ ಅಡ್ಡಬರುವ ಮರಗಳ ಉಳಿಸುವಿಕೆ/ಮರುನಾಟಿ/ತೆರವುಗೊಳಿಸುವ ಬಗ್ಗೆ

ಉಲ್ಲೇಖ: 1. ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ಯಲಹಂಕ ವಿಭಾಗ ಇವರ ಪತ್ರ ಸಂ: ಕಾಪಾಅ/ರ.ಮೂ.ಸೌ/ಯ.ವಿ/ಪಿಆರ್-202/2020-21 ದಿನಾಂಕ 23.11.2020 ಮತ್ತು 23.12.2020.

*******

### ಪ್ರಸ್ತಾವನೆ:

ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ಯಲಹಂಕ ವಿಭಾಗ ಇವರು ಉಲ್ಲೇಖದಡಿಯಲ್ಲಿನ ಪತ್ರಗಳಲ್ಲಿ ಎನ್. ಇ.ಎಸ್ ಸರ್ಕಲ್ ಇಂದ ಯಲಹಂಕ ರೈಲ್ವೆ ಸ್ಟೇಷನ್ ವೃತ್ತಕ್ಕೆ ಹೋಗುವ ಮಾರ್ಗದಲ್ಲಿ ಅನುಷ್ಠಾನಗೊಳಿಸುತ್ತಿರುವ ಸಬ್ ವೇ ರೋಡ್ ನಿರ್ಮಾಣ ಕಾಮಗಾರಿಗೆ ಮರಗಳ ತೆರವಿಗೆ ಬೇರೆ ಬೇರೆ ದಿನಾಂಕಗಳಲ್ಲಿ ಅರ್ಜಿ ಸಲ್ಲಿಸಿ ಅನುಮತಿ ಕೋರಿರುತ್ತಾರೆ. ಅದರಂತೆ ಸ್ಥಳ ಪರಿಶಿಲಿಸಿ ನೋಡಲಾಗಿ ಸರ್ಕಾರವು ಸಾರ್ವಜನಿಕ ಹಿತದೃಷ್ಟಿಯಿಂದ ನಿರ್ಮಿಸಲಾಗುತ್ತಿರುವ ರೈಲ್ವೆ ಕೆಳಸೇತುವೆ ಮತ್ತು ಸಬ್ ವೇ ರೋಡ್ ಕಾಮಗಾರಿಗೆ ಒಟ್ಟು 8 ವಿವಿದ ಜಾತಿಯ ಮರಗಳು ಅಡ್ಡಬರುತ್ತಿರುವುದು ಪರಿಶೀಲನೆಯಿಂದ ದೃಡಪಟ್ಟಿರುತ್ತದೆ. ಅದರಂತೆ ಮರಗಳ ಎಣಿಕೆ ಪಟ್ಟಿ ತಯಾರಿಸಿದ್ದು, ಸದರೀ ಪ್ರಸ್ತಾವನೆಯನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲದ ನಿರ್ದೇಶನದ ಪ್ರಕಾರ ವೃಕ್ಷ ತಜ್ಞರ ಸಮಿತಿಯ ಮುಂದೆ ಮಂಡಿಸಿ ಅವರಿಂದ ಸ್ಥಳ ಪರಿಶೀಲನಾ ವರದಿ ನಂತರ ಸಮಿತಿಯು ನೀಡುವ ಮಾರ್ಗದರ್ಶನದಂತೆ ವೃಕ್ಷಾಧಿಕಾರಿಯವರು ಕ್ರಮ ವಹಿಸಬೇಕಾಗಿರುತ್ತದೆ. ಅದರಂತೆ ಮರಗಳ ತೆರವಿನ ಬಗ್ಗೆ ಸಮಿತಿಯ ಮುಂದೆ ಮಂಡಿಸಲಾಯಿತು. ಆದ್ದರಿಂದ ಸಮಿತಿಯ ನಡಾವಳಿ ದಿನಾಂಕ 11.01.2021 ರಲ್ಲಿ ನೀಡಿರುವ ಮಾರ್ಗದರ್ಶನದಂತೆ ಹಾಗೂ ವೃಕ್ಷ ತಜ್ಞರ ಸಮಿತಿಯ ಸ್ಥಳ ಪರಿಶೀಲನೆಯಲ್ಲಿ ನೀಡಿರುವ ವರದಿಯಂತೆ ಕ್ರಮವಹಿಸಲು ತೀರ್ಮಾನಿಸಿದೆ ಆದ್ದರಿಂದ ಈ ಕೆಳಕಂಡ ಆದೇಶ.

### *ಆದೇಶ:*

ಮೇಲೆ ವಿವರಿಸಿರುವ ಕಾರಣಗಳು ಹಾಗೂ ವೃಕ್ಷಾಧಿಕಾರಿಯವರಿಗೆ ಕರ್ನಾಕ ವೃಕ್ಷ ಸಂರಕ್ಷಣಾ ಕಾಯ್ದೆ, 1976ರ ಕಲಂ 8 (3) ರಡಿ ಪ್ರದತ್ತವಾದ ಅಧಿಕಾರ ಹಿನ್ನಲೆಯಲ್ಲಿ ಯಲಹಂಕ ವಲಯದ ವ್ಯಾಪ್ತಿಯ ಎನ್. ಇ.ಎಸ್ ಸರ್ಕಲ್ ಇಂದ ಯಲಯಂಕ ರೈಲ್ವೆ ಸ್ಟೇಷನ್ ವೃತ್ತಕ್ಕೆ ಹೋಗುವ ಮಾರ್ಗದಲ್ಲಿ ಅನುಷ್ಠಾನಗೊಳಿಸುತ್ತಿರುವ ಕೆಳ ಸೇತುವೆ, ಸಬ್ ವೇ ರೋಡ್ ಕಾಮಗಾರಿಗೆ ಮರಗಳು ಅಡ್ಡ ಬರುತ್ತಿದ್ದು,

2..

ಸದರಿ ಮರಗಳಲ್ಲಿ ಮರುನಾಟಿ ಮಾಡುವ ಮರಗಳ ಸಂಖ್ಯೆ 02, ಕತ್ತರಿಸುವ ಮಾಡಬೇಕಾದ ಮರಗಳ ಸಂಖ್ಯೆ 06 ಮರಗಳ ಕತ್ತಾವಣೆ/ಮರುನಾಟಿ ಆದೇಶ ನೀಡಲು ವೃಕ್ಷ ತಜ್ಞರ ಸಮಿತಿಯ ಸ್ಥಳಪರಿಶೀಲನಾವರದಿಯಲ್ಲಿ ನೀಡಿರುವ ಕಾರಣದಂತೆ, ಮರಗಳಲ್ಲಿ ಮರುನಾಟಿ ಮತ್ತು ಕತ್ತಾವಣೆ ಮಾಡಬೇಕಾದ ಮರಗಳ ಸಂಖ್ಯೆ, ಜಾತಿ ಇತ್ಯಾದಿ ವಿವರ ಮತ್ತು ಷರತ್ತುಗಳೊಂದಿಗೆ, ಮರುನಾಟಿ ಮತ್ತು ಕತ್ತಾವಣೆ ಆದೇಶ ನೀಡಲಾಗಿದೆ. ವಿವರಗಳನ್ನು ಅನುಬಂಧ-1, ಅನುಬಂಧ-2 ರಲ್ಲಿ ನೀಡಲಾಗಿದೆ.

**ಘೋಷ್ವಾರೆ:**

| **ಒಟ್ಟು ಮರಗಳ ಸಂಖ್ಯೆ:** | **-08** |
|---|---|
| 1. ಮರುನಾಟಿ ಮಾಡಬೇಕಾದ ಮರಗಳ ಸಂಖ್ಯೆ: | -02 |
| 2. ಕತ್ತಾವಣೆಮಾಡಬೇಕಾದ ಮರಗಳ ಸಂಖ್ಯೆ: | -06 |

**ಷರತ್ತುಗಳು:**

- ಮರುನಾಟಿ ಕಾರ್ಯವನ್ನು ಅರಣ್ಯ ಸಿಬ್ಬಂದಿಗಳ ಸೂಕ್ತ ತಾಂತ್ರಿಕ ಮೇಲ್ವಿಚಾರಣೆಯಲ್ಲಿ ಅವರ ಸಲಹೆ ಸೂಚನೆಯಂತೆ ಕೈಗೊಳ್ಳತಕ್ಕದ್ದು.
- ಮರುನಾಟಿ ಮಾಡಬೇಕಾದ ಮರಗಳನ್ನು ವ್ಯಕ್ತಿ/ಸಂಸ್ಥೆಯ ಸಹಾಯದಿಂದ ಸ್ಥಳಾಂತರಿಸಿ ಅದನ್ನು ಸೂಕ್ತವಾದ ಸ್ಥಳವನ್ನು ಆರಿಸಿದ ನಂತರ, ಅರಣ್ಯಾಧಿಕಾರಿಗಳೊಂದಿಗೆ ಪರಿಶೀಲಿಸಿದ ನಂತರ ಮರುನಾಟಿಮಾಡುವುದು, ಮರುನಾಟಿಮಾಡಿ ಕನಿಷ್ಠ 3 ವರ್ಷಗಳ ಅವಧಿಯವರೆಗೆ ನಿರ್ವಹಣೆಮಾಡಬೇಕು.
- ಮರುನಾಟಿ ಕಾರ್ಯವನ್ನು ಕೈಗೊಳ್ಳುವ ವ್ಯಕ್ತಿ/ಸಂಸ್ಥೆಯು ಮರುನಾಟಿಮಾಡಲು ಅರ್ಹತೆ ಹೊಂದಿರತಕ್ಕದ್ದು ಹಾಗೂ ಅವರುಗಳ ಹೆಸರು ವಿಳಾಸ ಮತ್ತು ಮರುನಾಟಿಮಾಡದ ಮರದ ಸಂಖ್ಯೆಯೊಂದಿಗೆ ಮರದ ಛಾಯಾಚಿತ್ರಗಳನ್ನು ಇತ್ಯಾದಿಗಳನ್ನು ದಾಖಲೆ ರೂಪದಲ್ಲಿ ಸಂಗ್ರಹಿಸಿಡಬೇಕು.
- ಆದೇಶದಲ್ಲಿ ತಿಳಿಸಿರುವಂತೆ ಕತ್ತಾವಣೆಮಾಡುವ ಪತ್ರೀ ಮರಗಳ ಬದಲಿಗೆ ನೆಡುತ್ತಿರುವ (3) ಸಸಿಗಳ ವಿವರಗಳನ್ನು ಛಾಯಾಚಿತ್ರದೊಂದಿಗೆ ಕಛೇರಿಗೆ ಸಲ್ಲಿಸುವುದು.
- ತೆರವುಗೊಳಿಸಲಾದ ಪ್ರತೀ ಮರದ ಬದಲಿಗೆ ಎತ್ತರದ ಹಾಗೂ ಉತ್ತಮ ಜಾತಿಯ ಕನಿಷ್ಠ 3 ಸಸಿಗಳನ್ನು ಸೂಕ್ತ ಸ್ಥಳದಲ್ಲಿ ನೆಟ್ಟು 3 ವರ್ಷಗಳವರೆಗೆ ನಿರ್ವಹಿಸಬೇಕು

ವೃಕ್ಷಾಧಿಕಾರಿಗಳು ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಪ್ರತಿಯನ್ನು:-

1. ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲ ಭೂತ ಸೌಕರ್ಯ, ಬಿಬಿಎಂಪಿ ಯಲಹಂಕ ವಲಯ ಇವರಿಗೆ ಮಾಹಿತಿಗೆ ಹಾಗೂ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
2. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಬಿಬಿಎಂಪಿ ಇವರ ಮಾಹಿತಿಗೆ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
3. ವಲಯ/ಉಪ ವಲಯ ಅರಣ್ಯಾಧಿಕಾರಿ ಪೂರ್ವ ವಲಯ ಇವರ ಮಾಹಿಗೆ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.

# ಅನುಬಂಧ-1

## 1 ನೇ ಹಂತದಲ್ಲಿ ಮರುನಾಟಿ ಮಾಡಬೇಕಾದ ಮರಗಳ ವಿವರ

| ಕ್ರಮ.ಸಂ | ಮರದ ಸಂಖ್ಯೆ | ಮರದ ಜಾತಿ | ತೆಗೆದುಕೊಳ್ಳಬೇಕಾದ ಕ್ರಮ |
|---|---|---|---|
| 01 | 7 | ಮಾವು | ಮರುನಾಟಿ |
| 02 | 6 | ಹಲಸು | ಮರುನಾಟಿ |

3/2/21.

ವೃಕ್ಷಾಧಿಕಾರಿಗಳು ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು

ಅನುಬಂಧ-2

**1 ನೇ ಹಂತದಲ್ಲಿ ಕತ್ತಾವಣೆ ಮಾಡಬೇಕಾದ ಮರಗಳ ವಿವರ**

| ಕ್ರಮ.ಸಂ | ಮರದ ಸಂಖ್ಯೆ | ಮರದ ಜಾತಿ | ತೆಗೆದುಕೊಳ್ಳಬೇಕಾದ ಕ್ರಮ |
|---|---|---|---|
| 01 | 1 | ಮಳೆ ಮರ | ತೆರವುಗೊಳಿಸುವುದು |
| 02 | 2 | ಮಳೆ ಮರ | ತೆರವುಗೊಳಿಸುವುದು |
| 03 | 3 | ಮಳೆ ಮರ | ತೆರವುಗೊಳಿಸುವುದು |
| 04 | 4 | ಹುಣಸೆ | ತೆರವುಗೊಳಿಸುವುದು |
| 05 | 5 | ಮಳೆ ಮರ | ತೆರವುಗೊಳಿಸುವುದು |
| 06 | 8 | ಮಳೆ ಮರ | ತೆರವುಗೊಳಿಸುವುದು |

3/2/21

ವೃಕ್ಷಾಧಿಕಾರಿಗಳು ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು